# ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ7[2]ಪ್ರಾಶಿಅ:ಹೊ.ಶಾ.ನೋಂ:10:2021-22 ದಿನಾಂಕ: 21ನೇ ಜೂನ್ 2022

### : ಸುತ್ತೋಲೆ :

**ವಿಷಯ:** 2022-23ನೇ ಸಾಲಿಗೆ ಹೊಸ ಶಾಲೆಗಳ ನೋಂದಣಿಗಾಗಿ ಈಗಾಗಲೇ ಸಲ್ಲಿಕೆಯಾದ ಅರ್ಜಿಗಳನ್ನು ಪರಿಶೀಲಿಸಿ ನೋಂದಾಯಿಸುವ ಕಡೆಯ ದಿನಾಂಕ ವಿಸ್ತರಣೆ ಮಾಡಿದ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ:ಹೊ.ಶಾ.ನೋಂ:10: ದಿನಾಂಕ: 23ನೇ ಮೇ 2022

% % % % %

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ 2022-23ನೇ ಸಾಲಿಗೆ ಹೊಸ ಶಾಲೆಗಳನ್ನು ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಿ ಅಂತಿಮ ಆದೇಶ ಹೊರಡಿಸಲು ದಿನಾಂಕ:18-06-2022 ರಂದು ಅಂತಿಮ ದಿನಾಂಕವೆಂದು ನಿಗಧಿಪಡಿಸಲಾಗಿತ್ತು. ಆದರೆ ತಾಂತ್ರಿಕ ಕಾರಣಗಳಿಂದ ಮಂಜೂರು ಮಾಡಲು ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಪರಿಷ್ಕರಿಸಿ ಬಿಡುಗಡೆ ಮಾಡಲು ವಿಳಂಭವಾಗಿದ್ದು, ಈ ಅವಧಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಕ್ರಮವಹಿಸಲು ವಿಳಂಭವಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಇದರಿಂದಾಗಿ ಉಪನಿರ್ದೇಶಕರ ಹಂತದ ಲಾಗಿನ್‌ನಲ್ಲಿ ಕ್ರಮವಹಿಸದೇ ಉಳಿದಿರುವ ಅರ್ಜಿಗಳನ್ನು ವಿಲೇವಾರಿ ಮಾಡಬೇಕಾಗಿದ್ದು ಹಾಗೂ ಅಗತ್ಯ ಅರ್ಜಿಗಳನ್ನು ರೋಲ್ ಬ್ಯಾಕ್ ಮಾಡಿ ಮಾಹಿತಿ ಪಡೆಯಲು ಸಮಯಾವಕಾಶವು ಕಡಿಮೆಯಾಗಿರುತ್ತದೆ. ಆಡಳಿತ ಮಂಡಳಗಳು ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 10-06-2022ರವರೆಗೆ ಅವಕಾಶ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಅವಧಿಯೊಳಗೆ ಅಂದರೆ ದಿನಾಂಕ:10-06-2022ರ ಒಳಗೆ ಪೂರಕ ದಾಖಲಾತಿಗಳನ್ನು ಒದಗಿಸಿಕೊಂಡಿದ್ದರೂ ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡದೇ ಇದ್ದಲ್ಲಿ ಅಂತಹ ಆಡಳಿತ ಮಂಡಳಿಗಳಿಗೆ ರೋಲ್ ಬ್ಯಾಕ್ ಮಾಡಿದಲ್ಲಿ, ಆಡಳಿತ ಮಂಡಳಿಗಳು ಅಂತಹ ದಾಖಲಾತಿಗಳನ್ನು ಅಪ್ ಲೋಡ್ ಮಾಡಿ ಮರುಸಲ್ಲಿಸಲು ಅಂತಿಮ ಅವಕಾಶ ನೀಡಿ ತದನಂತರ ಉಪನಿರ್ದೇಶಕರ ಹಂತದಲ್ಲಿ ಇತ್ಯರ್ಥಪಡಿಸಲು ಹಾಗೂ ಇತ್ಯರ್ಥಪಡಿಸದೇ ಬಾಕಿ ಇರುವ ಕಡತಗಳನ್ನು ಪರಿಶೀಲಿಸಿ ಅಂತಿಮಗೊಳಿಸಲು ಈ ಕೆಳಕಂಡಂತೆ ದಿನಾಂಕವನ್ನು ವಿಸ್ತರಿಸಿದೆ.

| | | |
|---|---|---|
| 1 | ಉಪನಿರ್ದೇಶಕರು ಅರ್ಜಿಗಳನ್ನು ಪರಿಶೀಲಿಸಿ ಅಪೂರ್ಣ ಅರ್ಜಿಗಳನ್ನು ಆಡಳಿತ ಮಂಡಳಿಗೆ ಹಿಂತಿರುಗಿಸಲು ಮತ್ತು ಆಡಳಿತ ಮಂಡಳಿಗಳು ದಿನಾಂಕ:10-06-2022ರ ಒಳಗೆ ಪಡೆದಿರುವ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಮಾತ್ರ ಅಪ್ ಲೋಡ್ ಮಾಡಿ ಅರ್ಜಿಗಳನ್ನು ಸರಿಪಡಿಸಿ ಉಪನಿರ್ದೇಶಕರಿಗೆ ಪುನಃ ಹಿಂತಿರುಗಿಸಲು ಕಡೆಯ ದಿನಾಂಕ | 21.06.2022 ರಿಂದ 28.06.2022 |
| 2 | ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗಳಲ್ಲಿ ಹೊಸ ಶಾಲೆಗಳ ನೋಂದಣಿ / ಉನ್ನತೀಕರಿಸುವ ಶಾಲೆಗಳ ನೋಂದಣಿ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ ಅಥವಾ ತಿರಸ್ಕೃತ ಆದೇಶ ಹೊರಡಿಸಲು ಕಡೆಯ ದಿನಾಂಕ. | 22.06.2022 ರಿಂದ 29.06.2022 |

ಈ ದಿನಾಂಕದ ಒಳಗೆ ಎಲ್ಲಾ ಅರ್ಜಿಗಳನ್ನು ನಿಯಮಾನುಸಾರ ಇತ್ಯರ್ಥಪಡಿಸುವುದು. ಯಾವುದೇ ಅರ್ಜಿಗಳನ್ನು ಅಂತಿಮ ದಿನಾಂಕದ ನಂತರ ಇತ್ಯರ್ಥ ಪಡಿಸದೇ ಉಪನಿರ್ದೇಶಕರ ಲಾಗಿನ್‌ನಲ್ಲಿ ಬಾಕಿ ಉಳಿಸಿಕೊಂಡಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ